**<u>ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ</u>**

**<u>ಕ್ರಿಮಿನಲ್ ಮೊಕದ್ದಮೆ ನಂಃ 283/2023</u>**

ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ- 1

ಸಾಕ್ಷಿಯ ಹೆಸರು ಃ ಶ್ರೀಕಾಂತ ಕೆಲೂರ

ತಂದೆಯ ಹೆಸರು ಃ ಮಲ್ಲಪ್ಪ

ವಯಸ್ಸು ಃ **36** ವರ್ಷ

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಮುಳ್ಳೂರ

ದಿನಾಂಕಃ 13-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಸಸಅ ರವರಿಂದಃ

ಮೃತ ಮುತ್ತಪ್ಪ ಅಂಟರತಾನಿ ನನ್ನ ಸಂಬಂಧಿಕರು ಆಗಬೇಕು. ದಿ.19-03-2023 ರಂದು ನನ್ನ ಮೃತ ಮುತ್ತಪ್ಪ ಅಂಟರತಾನಿ ಒಂದು ಅಪಘಾತದಲ್ಲಿ ಮರಣ ಹೊಂದಿರುತ್ತಾನೆ. ಆದರೆ ಅವನು ಯಾವ ರೀತಿ ಮರಣ ಹೊಂದಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ನಾನು ಒಂದು ಬಿಳಿ ಹಾಳೆಗೆ ಸಹಿ ಮಾಡಿರುತ್ತೇನೆ.

ನಾನು ಈಗ ದೂರನ್ನು ನೋಡಿ ಗುರುತಿಸಿದ್ದು ನಿಪಿ-1 ಎಂದು, ಅದರಲ್ಲಿರುವ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಯನ್ನು ಕೋರಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿ. 19-03-2023 ರಂದು ಮಧ್ಯಾಹ್ನ 1.00 ಗಂಟೆಗೆ ನಾನು ಮತ್ತು ನನ್ನ ಅಣ್ಣನಾದ ರಮೇಶ ಹಾಗೂ ಅವನ ತಾಯಿಯಾದ ಚಾಸಾ-6 ಕೂಡಿಕೊಂಡು ಮೋಟರ ಸೈಕಲ ಸಂಖ್ಯೆ ಕೆಎ 26 ಇಇ 0329 ನ್ನು ತೆಗೆದುಕೊಂಡು ಬೆನಕನವಾಗಿ ಕ್ರಾಸ ಹತ್ತಿರ ಮೋಟರ ಸೈಕಲ ನ್ನು ಅತೀಜೋರಾಗಿ ನಿರ್ಲಕ್ಷ್ಯ ತನದಿಂದ ಮನಾವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಇನ್ನೊಬ್ಬ ಮೋಟರ ಸೈಕಲ ನಂ. ಕೆಎ 29 ಇಜಿ 8513 ಯ ಸವಾರನ್ನು ಅತೀ ಜೋರಾಗಿ ಬಂದು ಎದುರು ಬದುರು ಅಪಘಾತವಾಯಿತು ಎಂದರೆ ಸರಿ ಅಲ್ಲ. ಆಗ ನನ್ನ ಅಣ್ಣನ ಮಗನಾದ ರಮೇಶ 1 ನೇ ಆರೋಪಿಗೆ ಭಾರಿ ಗಾಯವಾಗಿತ್ತು ಎಂದರೆ ಸರಿ ಅಲ್ಲ. ಇನ್ನೊಬ್ಬ ಮೋಟರ ಸೈಕಲ ಸವಾರನು ಮುತ್ತಪ್ಪ ಅಂಟರತಾನಿಗೆ ಭಾರಿ ಗಾಯವಾಗಿರುತ್ತದೆ ಎಂದರೆ ಸರಿ ಅಲ್ಲ. ಮುತ್ತಪ್ಪ ಅಂಟರತಾನಿ ಕುಮಾರೇಶ್ವರ ಆಸ್ಪತ್ರೆಯಲ್ಲಿ ಉಪಚಾರ ಫಲಿಸದೆ ಮೃತನಾಗಿರುತ್ತಾನೆ ಎಂದು ನಾನು ಪುನಃ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಬಿ.ಎಚ್.ಜಿ. ವಕೀಲರಿಂದ ಃ ಪಾಟೀಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ

## <u>ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ</u>

<u>ಕ್ರಿಮಿನಲ್ ಮೊಕದ್ದಮೆ ನಂಃ **283/2023**</u>

ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ- 2

ಸಾಕ್ಷಿಯ ಹೆಸರು ಃ ಮಲ್ಲಪ್ಪ ತಳ್ಳಿಕೇರಿ

ತಂದೆಯ ಹೆಸರು ಃ ದೊಡ್ಡಹನಮಪ್ಪ

ವಯಸ್ಸು ಃ **39** ವರ್ಷ

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಐಹೊಳೆ

ದಿನಾಂಕಃ 13-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಸಸಅ ರವರಿಂದಃ

ನಾನು ಯಾವುದೇ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗೆ ಸಹಿ ಹಾಕಿದ್ದೇನೆ. ನಾನು ಈಗ ಒಂದು ಗುನ್ನಾ ಜಾಗೆ ಪಂಚನಾಮೆ ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಹಿ ನನ್ನದೇ ಅದನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಿ.ಪಿ.2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನಾನು ಈಗ ಒಂದು ಜಪ್ತಿ ಪಂಚನಾಮೆ ನೋಡುತ್ತಿದ್ದು ಅದನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಹಿ ನನ್ನದೇ ಅದನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನಿ.ಪಿ.3 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಯನ್ನು ಕೋರಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿ. 20-03-2023 ರಂದು ಮುಂಜಾನೆ 10.00 ರಿಂದ 11.00 ಗಂಟೆಯವರೆಗೆ ಚಾಸಾ-1 ರವರು ತೋರಿಸಿದಿ ಬೆನಕನವಾಗಿ ಐಹೊಳೆ ರಸ್ತೆಯಲ್ಲಿ ಬೆನಕನವಾರಿ ಸಮೀಪ ನನ್ನ ಮತ್ತು ಚಾಸಾ-3 ರ ಸಮಕ್ಷಮ ಗುನ್ನಾ ಜಾಗ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಆಕಾಲಕ್ಕೆ ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ ಅಲ್ಲ

ದಿ. 20-03-2023 ರಂದು ಮಧ್ಯಾಹ್ನ 12.00 ರಿಂದ 01.00 ಗಂಟೆಯವರೆಗೆ ಅಮೀನಗಡ ಪೋಲಿಸ ಠಾಣೆ ಆವರಣದಲ್ಲಿ ನನ್ನ ಮತ್ತು ಚಾಸಾ-3 ರ ಸಮಕ್ಷಮ ವಾಹನ ತಡೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಆ ಕಾಲಕ್ಕೆ ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ ಅಲ್ಲ. ಆ ಕಾಲಕ್ಕೆ ಮೋಟರ ಸೈಕಲ ಸಂಖ್ಯೆ ಕೆಎ 29 ಇಜಿ 8513 ಮತ್ತು ಕೆಎ 26 ಇಇ 0329 ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಬಿ.ಎಚ್.ಜಿ. ವಕೀಲರಿಂದ ಃ ಪಾಟೀಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ